ಬಹಳ ಜನಪ್ರಿಯವಾಗುತ್ತಿದೆ. ಇದು ಮೆಹೆಂದಿ ಶಾಸ್ತ್ರದ ದಿನವಾಗಿದ್ದು, ಉತ್ತರ ಭಾರತದಲ್ಲಿ ಮಾತ್ರ ಆಚರಿಸಿಕೊಳ್ಳುತ್ತಿದ್ದರು. ಇದೀಗ ಇಲ್ಲಿಗೂ ಕಾಲಿಟ್ಟಿದ್ದು, ಆ ದಿನ ಗಾಗ್ರಾ, ಲೆಹೆಂಗಾ ತೊಟ್ಟುಕೊಳ್ಳುವುದೂ ಇದೆ.

## ಧಾರೆಗಾಗಿ...

ಧಾರೆ ಎಂಬ ಮಹತ್ವದ ಘಟ್ಟದಲ್ಲಿ ವಧು, ಬನಾರಸ್, ಜಾರ್ಜೆಟ್, ಕಂಚಿ ಸೀರೆ ಉಟ್ಟುಕೊಳ್ಳುವುದು ಇದೆ. ಈ ಸೀರೆಗಳಿಗೆ ಕಾಂಟ್ರಾಸ್ಟ್ ಬ್ಲೌಸ್ ಹಾಕಿಕೊಂಡು ಸೀರೆಯಲ್ಲಿ ಹತ್ತಾರು ಫ್ಲೀಟ್ ಬರುವಂತೆ ಉಟ್ಟುಕೊಳ್ಳುವುದೂ ಮದುಮಗಳಿಗೆ ಚೆನ್ನಾಗಿ ಕಾಣುತ್ತದೆ.

## ಮದುವೆಗಾಗಿ ಚಿನ್ನಾಭರಣ

ಮದುವೆ ಎಂಬ ವಿಶೇಷ ದಿನಕ್ಕಾಗಿ ಉಡುಗೆ, ಒಡವೆ, ಮೇಕಪ್ ಮುಂತಾದವು ಕೂಡ ವಿಶೇಷವಾಗಿಯೇ ಇರಬೇಕು. ಒಡವೆಯ ವಿಚಾರಕ್ಕೆ ಬಂದರೆ ಇಂದು ಸಾಂಪ್ರದಾಯಿಕ ಒಡವೆಗಳ ಜೊತೆಗೆ ಸಮಕಾಲೀನ ಹಾಗೂ ಆಧುನಿಕ ವಿನ್ಯಾಸಗಳ ಆಭರಣಗಳು ಟ್ರೆಂಡ್ ಎನಿಸಿಕೊಂಡಿವೆ. ವಧು ಧರಿಸುವ ಒಡವೆಗಳು ಭರ್ಜರಿ ರೇಷ್ಮೆ ಸೀರೆಗೆ ಚೆನ್ನಾಗಿ ಒಪ್ಪಬೇಕು. ಇದಕ್ಕಾಗಿ ವಧುವಿನ ಒಡವೆ ಸಂಗ್ರಹದಲ್ಲಿ ವಿವಿಧ ವಿನ್ಯಾಸದ, ಕುಸುರಿ ಕೆತ್ತನೆಯ ಒಟ್ಟಿನಲ್ಲಿ ಸುಂದರವಾಗಿ ಕಾಣುವಂತಿರುವ ಆಭರಣಗಳು ಬೇಕು, ಚಿನ್ನದ ಒಡವೆ ಜೊತೆಗೆ ವಜ್ರದ ಆಭರಣವೂ ಇದ್ದರೆ ಮತ್ತೂ ಚೆನ್ನ.

ಮದುವೆಯ ಸೀಸನ್‌ನಲ್ಲಿ ಆಭರಣಗಳ ಖರೀದಿ ಜೋರು. ನೆಕ್ಲೇಸ್, ಕಿವಿಯೋಲೆ, ಬಳೆಗಳು, ಉಂಗುರಗಳನ್ನು ಇಂದಿನ ಟ್ರೆಂಡ್‌ಗೆ ತಕ್ಕಂತೆ ಧರಿಸಿದರೆ ಮದುಮಗಳು ಇನ್ನಷ್ಟು ಮಿಂಚುತ್ತಾಳೆ. ಚಿನ್ನ, ವಜ್ರದಲ್ಲಿ ಮಾಡಿದ ತರಾವರಿ ಆಭರಣಗಳ ಜತೆಗೆ ಮದುವೆಗೆ, ಪಾರ್ಟಿಗೆ, ಶುಭ ಕಾರ್ಯಕ್ರಮಕ್ಕೆ ಹೋಗುವ ಮಹಿಳೆಯರು ಹೊಸ ಹೊಸ ವಿನ್ಯಾಸಗಳ ಒಡವೆಗಳತ್ತ ಮುಖ ಮಾಡಿದ್ದಾರೆ. ಇದೇ ಸಾಲಿಗೆ ಸೇರುವ ಆಭರಣಗಳಲ್ಲಿ ಸೌತ್ ಹೆರಿಟೇಜ್ ಸಂಗ್ರಹ, ಅನ್‌ಕಟ್ ಡೈಮಂಡ್ ಹಾಗೂ ಜೇಡ್ ಆಭರಣ, ವಿಕ್ಟೋರಿಯನ್ ಆಭರಣಗಳೂ ಇದ್ದು ಮಹಿಳೆಯರನ್ನು ತಕ್ಷಣ ಸೆಳೆಯುತ್ತದೆ.

ಸೌತ್ ಹೆರಿಟೇಜ್ ಸಂಗ್ರಹದಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ವಿವಿಧ ದೇವಾಲಯಗಳಲ್ಲಿರುವ ದೇವಾನುದೇವತೆಗಳ ವಿಗ್ರಹಗಳಿಂದ ಪ್ರೇರಿತವಾಗಿ ತಯಾರಿಸಿದ ಆಭರಣಗಳಿವೆ. ಇಂತಹ ಆಭರಣಗಳು ಸಾಂಪ್ರದಾಯಿಕ ಮತ್ತು ಸಮಕಾಲೀನ ಎರಡೂ ಮನೋಭಾವದವರನ್ನು ಸೆಳೆಯುತ್ತದೆ. ಅಲ್ಲದೆ ಎರಡೂ ರೀತಿಯ ಉಡುಗೆಗಳಿಗೆ ಸರಿ ಹೊಂದುತ್ತವೆ. ಹೀಗಾಗಿ ಮದುಮಗಳ ಅಲಂಕಾರಕ್ಕಾಗಿ ಸಹ ಇಂತಹ ಆಭರಣಗಳನ್ನೇ ಇದೀಗ ಹೆಚ್ಚು ಹೆಚ್ಚು ಖರೀದಿಸುತ್ತಿದ್ದಾರೆ.

ಸಾಂಪ್ರದಾಯಿಕ ಆಭರಣ ಶ್ರೇಣಿಯಡಿ, ನೆಕ್ಲೇಸ್, ಕಿವಿಯೋಲೆ, ಬಳೆಗಳು, ಪಚ್ಚೆ, ವಜ್ರ, ಮಾಣಿಕ್ಯ ಹಾಗೂ ಚಿನ್ನದಿಂದ ತಯಾರಿಸಿದ ಆಕರ್ಷಕ ಮಾಂಗ್ಟೀಕಾಗಳು (ಹಣೆಯ ಮೇಲೆ ಧರಿಸುವಂತಹ ಆಭರಣ) ಲಭ್ಯ. ಈ ಸಂಗ್ರಹವು ವಧುವಿನ ವೈಭವಕ್ಕೆ ಸರಿ ಹೊಂದುವಂತಿದೆ, ಮದುವೆ, ಮುಂಜಿಗಳಂತಹ ಅದ್ಧೂರಿಯ ಸಂದರ್ಭಗಳಲ್ಲಿ ಧರಿಸಲು ಸೂಕ್ತವಾಗಿವೆ.



## ಮದುಮಗನಿಗೂ ಒಡವೆ ಸಿರಿ...

ವರ ಮಹಾಶಯ ಮದುವೆಯ ಕೇಂದ್ರ ಬಿಂದು. ವಧು ಇಷ್ಟೊಂದು ಆಭರಣ ಧರಿಸಿ ಮಿಂಚುತ್ತಿರುವಾಗ ವರನಿಗೂ ಒಡವೆ ತೊಡಿಸದಿದ್ದರೆ ಹೇಗೆ? ಮದುಮಗನಿಗಾಗಿಯೇ ಪೋಲ್ಕಾ ಮತ್ತು ಮುತ್ತಿನ ಕಾಂಬಿನೇಷನ್‌ನೊಂದಿಗೆ ಮಾಡಿದ ಒಡವೆ ಚೆನ್ನಾಗಿ ಒಪ್ಪುವುದಲ್ಲದೆ ಎಲಿಗೆಂಟ್ ಲುಕ್ ಕೊಡುತ್ತದೆ.

ಸಾಂಪ್ರದಾಯಿಕ ಉಡುಗೆ ತೊಟ್ಟಾಗ ಐದೆಳೆ ಸರ ಎದ್ದು ಕಾಣುತ್ತದೆ. ರಿಸೆಪ್ಶನ್ ಸಂದರ್ಭದಲ್ಲಿ ಶೇರ್ವಾನಿ ತೊಟ್ಟಾಗ ಮುತ್ತಿನ ಅಥವಾ ಕೆಂಪು ಹರಳಿನ ಸರ ಚೆನ್ನಾಗಿ ಕಾಣುತ್ತದೆ.



ಉಮಾ ಜಯಕುಮಾರ್

ಪ್ರಾಂತ್ಯಕ್ಕೆ ತಕ್ಕಂತೆ ಒಡವೆ ದಕ್ಷಿಣ ಭಾರತೀಯ ವಧು ಈಗೀಗ ಮಾಂಗ್ಟೀಕಾದಂತಹ ಆಭರಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರೆ, ಉತ್ತರ ಭಾರತೀಯರು ಮದುವೆ ದಿನಕ್ಕಾಗಿಯೇ ದಕ್ಷಿಣ ಭಾರತೀಯ ಶೈಲಿಯ ಒಡವೆಗೆ ಆಭರಣಗಳನ್ನು ಇಷ್ಟಪಡುತ್ತಿದ್ದಾರೆ. ಉಡುಪಿಗೆ ತಕ್ಕಂತೆ ಒಡವೆಗಳನ್ನು 'ಮಿಕ್ಸ್ ಅಂಡ್ ಮ್ಯಾಚ್' ಮಾಡಿಕೊಳ್ಳುವ ಟ್ರೆಂಡ್ ಕೂಡ ಈಚೆಗಿನದ್ದೇ. ಟು ಇನ್ ವನ್ ಒಡವೆಗಳು, ಹಾರ, ನೆಕ್ಲೇಸ್, ಉಂಗುರ, ಪೆಂಡೆಂಟ್ ಮುಂತಾದವು ಒಂದೇ ರೀತಿಯ ಸೀಕ್ವೆನ್ಸ್ ವಿನ್ಯಾಸ ಹೊಂದಿರುವಂಥದ್ದು ಕೂಡ ವಧುವಿಗಾಗಿಯೇ ರೂಪಿಸಿದ ಒಡವೆಗಳು. ಇದರಲ್ಲಿ ಗುಲಾಬಿ ಹೂವು, ನವಿಲಿನ ವಿನ್ಯಾಸ, ವಿವಿಧ ದೇವಾನುದೇವತೆಗಳ ವಿನ್ಯಾಸದವೂ ಸೇರಿದ್ದು ವಧುವಿಗೆ ಪ್ಲೆಸೆಂಟ್ ಲುಕ್ ಕೊಡುವಂತಿವೆ.

## ಸ್ಪಾರ್ಕ್ಲಿಂಗ್ ಡೈಮಂಡ್

ಇದು ಮದುವಣಗಿತ್ತಿ ಎಂದಿಗೂ ಬಯಸುವ ಒಡವೆ. ಅತ್ಯಂತ ಹೊಳಪುಳ್ಳ ಒಡವೆ ಇದಾಗಿದ್ದು, ವಜ್ರ ಮತ್ತು ಎಮರಾಲ್ಡ್‌ಗಳನ್ನು ಬಳಸಿ ಇದನ್ನು ವಿನ್ಯಾಸ ಮಾಡಲಾಗುತ್ತದೆ. ಅಲ್ಲದೆ ಇದು ಇತ್ತೀಚಿನ ಕ್ಲಾಸಿಕ್ ಫ್ಯಾಷನ್ ಕೂಡ ಆಗಿದೆ. ಈ ಮಾದರಿಯ ವಜ್ರದ ಒಡವೆಗಳಲ್ಲಿ ನೆಕ್ಲೇಸ್ ಮತ್ತು ಕಣ್ಸೆಳೆಯುವ ಜುಮ್ಕಾಗಳು ಗಾಢ ವರ್ಣದ ರೇಷ್ಮೆ ಸೀರೆ ಹಾಗೂ ಲೆಹೆಂಗಾಗಳಿಗೆ ಸೂಕ್ತವಾಗಿ ಒಪ್ಪುವಂತಿವೆ.

'ಟು ಇನ್ ವನ್' ಒಡವೆ ಕೆಲವು ಒಡವೆಗಳು ಹಾರವಾಗಿಯೂ ಬಳಸಬಹುದು, ಅದನ್ನೇ ಫೋಲ್ಡ್ ಮಾಡಿದರೆ ಬ್ರೇಸ್ಲೆಟ್ ಆಗಿಯೂ ಮಾರ್ಪಾಡು ಮಾಡಿಕೊಳ್ಳಬಹುದು. ಪೆಂಡೆಂಟ್ ಆಗಿಯೂ ಬಳಸಬಹುದು, ಉಂಗುರವಾಗಿಯೂ ಬಳಸುವ ಅವಕಾಶವಿರುತ್ತದೆ. ಇಂಥ ಆಭರಣಗಳನ್ನು ಮದುವೆಯಲ್ಲಿ ಒಂದೇ ಹಾಕಿಕೊಂಡರೆ ಸಖತ್ ಲುಕ್ ಕೊಡುತ್ತದೆ. ಇನ್ನು ಸ್ಟೇಟ್‌ಮೆಂಟ್ ಪೀಸ್ ಒಡವೆಗಳು ಮದುವೆಯ ಹೆಣ್ಣು ಧರಿಸಿಕೊಳ್ಳಲೇಬೇಕು ಎನ್ನುವಷ್ಟು ಜನಪ್ರಿಯವಾಗಿವೆ.